O.S .No. 78/2011
PW-1

ದಿನಾಂಕ: 13.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು **1** ಮತ್ತು **2** ನೇ ಪ್ರತಿವಾದಿ ಪರ ಶ್ರೀ ಎಸ್.ಎಸ್.ಜಿ. ವಕೀಲರಿಂದಃ</u>

ನಿಪಿ-15 ರಿಂದ 17 ಪಹಣಿ ಪತ್ರಿಕೆಗಳಲ್ಲಿ ಎಂ.ಆರ್, ನಂಬರ ನಮೂದು ಇಲ್ಲ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ಹೇಳುತ್ತಾರೆ. ನಿಪಿ-15 ರಿಂದ 17 ನ್ನು ನಾನೇ ನಮ್ಮ ವಕೀಲರಿಗೆ ನೀಡಿರುತ್ತೇನೆ. ನಾನು ಪಿಯುಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-16 ರಿಂದ 18 ರಂತೆ ಪಹಣಿ ಪತ್ರಿಕೆಗಳಲ್ಲಿ ಎಂ.ಆರ್, ನಂಬರ ನಮೂದು ಇಲ್ಲ ಎಂದರೆ ಸರಿ. 3 ನೇ ಪ್ರತಿವಾದಿ ಹಾಗೂ ಸಣ್ಣನಾಯಕ ರವರಿಗೆ ಕಾನೂನು ಬದ್ದವಾಗಿ ಖಾತೆಯಾಗಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಹಾಗೂ ಸಣ್ಣನಾಯಕ ರವರಿಗೆ ಕಾನೂನು ಬದ್ದವಾಗಿ ಖಾತೆಯಾಗಿಲ್ಲದೇ ಇರುವುದರಿಂದ ಅವರು ಮಾಡಿಕೊಂಡಿರುವ ಕ್ರಯ ಪತ್ರ ಸೃಷ್ಟಿತವಾದದ್ದು ಎಂದರೆ ಸುಳ್ಳು. 3 ನೇ ಪ್ರತಿವಾದಿ ಹಾಗೂ ಸಣ್ಣನಾಯಕ ರವರಿಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ, ಅವರ ವಾರಸುದಾರರಿಂದ ಸುಳ್ಳಾಗಿ ಖರೀದಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-1 ರಂತೆ ನಿಮಗೆ ಯಾವುದೇ ಹಕ್ಕು, ಅಧಿಕಾರಿ, ಮಾಲೀಕತ್ವ ವರ್ಗಾವಣೆಗೊಂಡಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ನೈಜ ಸ್ವಾದೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

ನಿಪಿ-1 ಮೂಲ ಪ್ರತಿಯಲ್ಲ ಎಂದರೆ ಸುಳ್ಳು. ನಿಪಿ-1 ದೃಢೀಕೃತ ಪ್ರತಿ ಎಂದರೆ ಸರಿ. ನಿಪಿ-1 ರ ಮೂಲ ಪ್ರತಿ ಏನಾಯಿತು ಎಂದು ದಾವೆಯಲ್ಲಿ ಪ್ರಸ್ತಾಪ ಮಾಡಿಲ್ಲ ಎಂದರೆ ಸಾಕ್ಷಿ ಮುಂದೆ ಹೇಳುತ್ತೇನೆ ಎಂದು ಹೇಳುತ್ತಾರೆ. ನಿಪಿ-1 ಕಾನೂನು ಬದ್ದ ದಾಖಲಾತಿಯಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಯಾವ ಸಮಯದದಂದು ತೊಂದರೆ ಕೊಟ್ಟರು ಎಂದು ನಿಮ್ಮ ವಾದ ಪತ್ರದಲ್ಲಿ ನಮೂದು ಇಲ್ಲ ಎಂದರೆ ಸರಿ. ನೀವು ದಾವಾ ಆಸ್ತಿಯ ಮೇಲೆ ದಾಖಲಾತಿಯ ಮೇಲೆ ಸ್ವಾದೀನ ಇದ್ದು,ನೈಜ ಸ್ವಾಧೀನ ಇಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ನೀವು ಸ್ವಾಧೀನ ಇರುವುದನ್ನು ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ಶ್ರೀನಿವಾಸ ಎಂಬುವವರು ಇದ್ದಾರೆ ಎಂದು ಹೇಳುತ್ತಾರೆ. ಶ್ರೀನಿವಾಸ ಎಂಬುವವರು ದಾವಾ ಆಸ್ತಿಯ ಅಕ್ಕಪಕ್ಕದವರು ಅಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲದೇ

ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-1 ಮೋಸದ ಪತ್ರ ಎಂದರೆ ಸರಿಯಲ್ಲ. ನಿಪಿ-1 ರ ಆಧಾರ ಮೇಲೆ 1 ಮತ್ತು 2 ನೇ ಪ್ರತಿವಾದಿಗಳ ಮೇಲೆ ನೈಜ ಸ್ವಾಧೀನವನ್ನು ದಾವೆ ಹೂಡಿ ಕಿತ್ತುಕೊಳ್ಳಲು ಪ್ರಯತ್ನಿಸಿರುತ್ತಿರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕದವರನ್ನು ಕರೆದುಕೊಂಡು ಬಂದು ಸಾಕ್ಷ್ಯ ನುಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಬಂದು ಸಾಕ್ಷ್ಯ ಹೇಳುತ್ತಾರೆಂಬುದು ಯಾವ ಗ್ಯಾರಂಟಿ ಎಂದು ಹೇಳುತ್ತಾರೆ. ನೈಜ ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ಅಕ್ಕಪಕ್ಕದವರು ಯಾರೂ ಸಾಕ್ಷ್ಯ ನುಡಿಯುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಿಮ್ಮ ಆಸ್ತಿ ನಿಮ್ಮ ಜೀವಕ್ಕೆ ಧಕ್ಕೆ ಉಂಟಾದಾಗ ಪೊಲೀಸ್ ಠಾಣೆಗೆ ದೂರು ದಾಖಲಿಸುವ ಪದ್ಧತಿ ಇದೆ ಎಂದರೆ ಸರಿ. ದಾವೆಯಲ್ಲಿ ನೀವು 1 ಮತ್ತು 2 ನೇ ಪ್ರತಿವಾದಿಗಳ ವಿರುದ್ಧ ಠಾಣೆಯಲ್ಲಿ ದೂರು ದಾಖಲಿಸಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಬಂದೆ ಎಂದು ಹೇಳುತ್ತಾರೆ.

<u>ಪಾಟೀ ಸವಾಲು **3** ನೇ ಪ್ರತಿವಾದಿ ಪರ ಶ್ರೀ ಎ.ಕೆ.ಎನ್. ವಕೀಲರಿಂದಃ</u>

3 ನೇ ಪ್ರತಿವಾದಿ ವಕೀಲರು 1 ಮತ್ತು 2 ನೇ ಪ್ರತಿವಾದಿಯ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.

<u>ಪಾಟೀ ಸವಾಲು **5** ನೇ ಪ್ರತಿವಾದಿ ಪರ ಶ್ರೀ ಬಿ.ಆರ್.ಎಲ್. ವಕೀಲರಿಂದಃ</u>

ಕಾಲಾವಕಾಶ ಕೋರಿದ್ದು, ಆಲಿಸಿ ಅನುಮತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.